**ಕರ್ನಾಟಕ ಸರ್ಕಾರದ ನಡವಳಿ**

**ವಿಷಯ:** 1) ಶ್ರೀ ವೈ.ಬಿ ತಳವಾರ್, ಗ್ರಾಮ ಪಂಚಾಯತ್ ಕಾರ್ಯದರ್ಶಿ ಮತ್ತು 2) ಶ್ರೀ ಆರ್. ಗೌಡಗೇರ್, ಗ್ರಾಮ ಪಂಚಾಯತ್ ಕಾರ್ಯದರ್ಶಿ, ಉಪ್ಪಣಸಿ ಗ್ರಾಮ ಪಂಚಾಯತ್, ಹಾನಗಲ್ ತಾಲ್ಲೂಕು, ಹಾವೇರಿ ಜಿಲ್ಲೆ ಇವರ ವಿರುದ್ಧ ಲೋಕಾಯುಕ್ತ ವಿಚಾರಣೆ– ಅಂತಿಮ ಆದೇಶ.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 509 ಗ್ರಾಪಂಕಾ 2016, ದಿನಾಂಕ: 12.09.2016.
2. ಅಪರ ನಿಬಂಧಕರು, ವಿಚಾರಣೆಗಳು–9, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಮಾನ್ಯ ಉಪಲೋಕಾಯುಕ್ತರವರಿಗೆ ಸಲ್ಲಿಸಿದ ವಿಚಾರಣಾ ವರದಿ ಸಂಖ್ಯೆ: UPLOK-1 / DE/437/2016/ARE-9, ದಿನಾಂಕ: 30.04.2019.
3. ಮಾನ್ಯ ಉಪ ಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಶಿಫಾರಸ್ಸು ಸಂಖ್ಯೆ: UPLOK-1 / DE/437/2016/ARE-9, ದಿನಾಂಕ: 03.05.2019.
4. ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್ ಸಂಖ್ಯೆ: ಗ್ರಾಅಪ 255 ಗ್ರಾಪಂಕಾ 2019, ದಿ:15.05.2019 ಮತ್ತು ನೆನಪೋಲೆ ಪತ್ರ ದಿನಾಂಕ: 03.02.2021.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ ಶ್ರೀ ವೈ.ಬಿ ತಳವಾರ್, ಗ್ರಾಮ ಪಂಚಾಯತ್ ಕಾರ್ಯದರ್ಶಿ ಮತ್ತು 2) ಶ್ರೀ ಆರ್. ಗೌಡಗೇರ್, ಗ್ರಾಮ ಪಂಚಾಯತ್ ಕಾರ್ಯದರ್ಶಿ, ಉಪ್ಪಣಸಿ ಗ್ರಾಮ ಪಂಚಾಯತ್, ಹಾನಗಲ್ ತಾಲ್ಲೂಕು, ಹಾವೇರಿ ಜಿಲ್ಲೆ ಇವರುಗಳ ವಿರುದ್ಧ ಈ ಕೆಳಕಂಡ ಆರೋಪಗಳಿಗೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮವಳಿಗಳು 1957 ರ ನಿಯಮ 14–ಎ ರಡಿಯಲ್ಲಿ ಮಾನ್ಯ ಉಪ ಲೋಕಾಯುಕ್ತರಿಗೆ ವಹಿಸಲಾಗಿತ್ತು.

**" ದೋಷಾರೋಪಣೆ":–**

" ಆಪಾದಿತ ಸರ್ಕಾರಿ ನೌಕರರಾದ ನೀವು– ಎಂ.ಜಿ.ಎನ್.ಆರ್.ಇ.ಜಿ.ಎ ಆಶ್ರಯ ಮತ್ತು ಕುಡಿಯುವ ನೀರಿನ ಯೋಜನೆ ಅಡಿಯಲ್ಲಿ ನಡೆದಿರುವ ಹಣ ದುರುಪಯೋಗಕ್ಕೆ ಸಂಬಂಧಿಸಿದಂತೆ, ತನಿಖಾಧಿಕಾರಿಗಳು ತನಿಖಾ ವರದಿಯನ್ನು ಸಲ್ಲಿಸಿದ್ದು, ಅದರಲ್ಲಿ 1ನೇ ಆಪಾದನೆಗೆ ಸಂಬಂಧಿಸಿದಂತೆ ರೂ 1,23,422/– ಗಳ, 3ನೇ ಆಪಾದನೆಗೆ ಸಂಬಂಧಿಸಿದಂತೆ ರೂ. 4.73 ಲಕ್ಷ, ಒಟ್ಟು ಮೊತ್ತ ರೂ. 5,96,422/– ದುರುಪಯೋಗವಾಗಿರುವುದು ಹಾಗೂ 4ನೇ ಆಪಾದನೆಗೆ ಸಂಬಂಧಿಸಿದಂತೆ ಕೋಟೇಷನ್ ಮೂಲಕ ದರಪಟ್ಟಿಯಂತೆ ಬೋರ್‌ವೆಲ್ ನಿರ್ವಹಣೆಗಾಗಿ ಹಾಗೂ ಸಾಮಾಗ್ರಿಗಳನ್ನು ಖರೀದಿಸದೇ ನಿಯಮ ಉಲ್ಲಂಘನೆ ಮಾಡಿರುತ್ತೀರಿ.

ಆದ್ದರಿಂದ ನೀವು ಕರ್ತವ್ಯಲೋಪವೆಸಗಿ ಸರ್ಕಾರಿ ಸರ್ಕಾರಿ ನೌಕರರಾದ ನೀವು ಕರ್ನಾಟಕ ಸರ್ಕಾರಿ ಸೇವಾ (ನಡತೆ) ನಿಯಮಾವಳಿ 1966 ರ ನಿಯಮ 3(1) ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿದ್ದೀರಿ."

ಮೇಲೆ ಓದಲಾದ ಕ್ರಮ ಸಂಖ್ಯೆ (2) ಮತ್ತು (3) ರಲ್ಲಿ (1) ಶ್ರೀ ವೈ.ಬಿ ತಳವಾರ್, ಗ್ರಾಮ ಪಂಚಾಯತ್ ಕಾರ್ಯದರ್ಶಿ ಮತ್ತು 2) ಶ್ರೀ ಆರ್. ಗೌಡಗೇರ್, ಗ್ರಾಮ ಪಂಚಾಯತ್ ಕಾರ್ಯದರ್ಶಿ, ಉಪ್ಪಣಸಿ ಗ್ರಾಮ ಪಂಚಾಯತ್, ಹಾನಗಲ್ ತಾಲ್ಲೂಕು, ಹಾವೇರಿ ಜಿಲ್ಲೆ ಇವರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ 1ನೇ ಎದುರುದಾರರಾದ ಶ್ರೀ ವೈ.ಬಿ ತಳವಾರ್, ಗ್ರಾಮ ಪಂಚಾಯತ್ ಕಾರ್ಯದರ್ಶಿ ಇವರನ್ನು ಸದರಿ ಆರೋಪಗಳಿಂದ ದೋಷಮುಕ್ತಗೊಳಿಸಿ ಮತ್ತು 2ನೇ ಎದುರುದಾರರಾದ ಶ್ರೀ ಆರ್. ಗೌಡಗೇರ್, ಗ್ರಾಮ ಪಂಚಾಯತ್ ಕಾರ್ಯದರ್ಶಿ ಇವರ ಮೇಲಿನ ಆರೋಪಗಳು ಸಾಬೀತಾಗಿದೆಯೆಂದು ನಿರ್ಣಯಿಸಿರುತ್ತಾರೆ.

..2

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತರವರು ಅಂಗೀಕರಿಸಿ, 1ನೇ ಎದುರುದಾರರಾದ ಶ್ರೀ ವೈ.ಬಿ ತಳವಾರ್, ಗ್ರಾಮ ಪಂಚಾಯತ್ ಕಾರ್ಯದರ್ಶಿ ಇವರನ್ನು ಸದರಿ ಆರೋಪಗಳಿಂದ ದೋಷಮುಕ್ತಗೊಳಿಸಿ ಮತ್ತು 2ನೇ ಎದುರುದಾರರಾದ ಶ್ರೀ ಆರ್. ಗೌಡಗೇರ್, ಗ್ರಾಮ ಪಂಚಾಯತ್ ಕಾರ್ಯದರ್ಶಿ, ಉಪ್ಪಣಸಿ ಗ್ರಾಮ ಪಂಚಾಯತ್, ಹಾನಗಲ್ ತಾಲ್ಲೂಕು, ಹಾವೇರಿ ಜಿಲ್ಲೆ ಇವರ ವಿರುದ್ದ ಸಾಬೀತಾಗಿರುವ ಆರೋಪಕ್ಕೆ ಅನುಗುಣವಾಗಿ " ಇವರಿಂದ ರೂ. 5,96,422/- ಗಳನ್ನು ಇವರಿಗೆ ಪಾವತಿಯಾಗುವ ವೇತನ ಭತ್ಯೆಗಳಿಂದ ವಸೂಲಿ ಮಾಡಲು, ಪೂರ್ತಿ ಹಣವನ್ನು ಇವರಿಗೆ ಪಾವತಿಯಾಗುವ ವೇತನ ಭತ್ಯೆಗಳಿಂದ ವಸೂಲಿ ಮಾಡಲು ಸಾಧ್ಯವಾಗದಿದ್ದಲ್ಲಿ ಇವರಿಗೆ ದೊರೆಯುವ ಪಿಂಚಣಿಯಲ್ಲಿ ವಸೂಲಿ ಮಾಡುವ ದಂಡನೆಯನ್ನು ಹಾಗೂ 1 ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮ ಸಹಿತವಾಗಿ ತಡೆಹಿಡಿಯುವ " (For imposing penalty of recovering a sum 5,96,422/- from the salary and other allowances payable to DGO-2 Sri R Gowdager, Grama Panchayath Secretary, Uppanasi Grama Panchayath, Hangal Taluk, Haveri District. If the entire amount cannot be recovered from the salary and allowances payable to DGO-2, the balance amount shall be recoverd from the pensionary benefits payable to DGO-2 Sri R Gowdager. It is also recommended to the Government for imposing penalty of withholding one annual increment payable to DGO-2 Sri R Gowdager with cumulative effect) ದಂಡನೆ ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4) ರಲ್ಲಿ ಶ್ರೀ ಆರ್. ಗೌಡಗೇರ್, ಗ್ರಾಮ ಪಂಚಾಯತ್ ಕಾರ್ಯದರ್ಶಿ, ಉಪ್ಪಣಸಿ ಗ್ರಾಮ ಪಂಚಾಯತ್, ಹಾನಗಲ್ ತಾಲ್ಲೂಕು, ಹಾವೇರಿ ಜಿಲ್ಲೆ ಇವರಿಗೆ ವಿಚಾರಣಾಧಿಕಾರಿಯವರ ವರದಿ ಮತ್ತು ಮಾನ್ಯ ಉಪಲೋಕಾಯುಕ್ತ ರವರ ಶಿಫಾರಸ್ಸಿನ ಪ್ರತಿಯೊಂದಿಗೆ 2ನೇ ಕಾರಣ ಕೇಳುವ ನೋಟೀಸ್ ಮತ್ತು ನೆನಪೋಲೆಯನ್ನು ಜಾರಿಗೊಳಿಸಲಾಗಿತ್ತು.

ಮುಂದುವರೆದು, ಶ್ರೀ ಆರ್. ಗೌಡಗೇರ್, ಗ್ರಾಮ ಪಂಚಾಯತ್ ಕಾರ್ಯದರ್ಶಿ, ಉಪ್ಪಣಸಿ ಗ್ರಾಮ ಪಂಚಾಯತ್, ಹಾನಗಲ್ ತಾಲ್ಲೂಕು, ಹಾವೇರಿ ಜಿಲ್ಲೆ ಇವರು ದಿನಾಂಕ: 02.03.2019 ರಂದು ಮರಣ ಹೊಂದಿರುವುದಾಗಿ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್ ಹಾನಗಲ್ಲ, ಹಾವೇರಿ ಜಿಲ್ಲೆರವರು ವರದಿ ಸಲ್ಲಿಸಿರುತ್ತಾರೆ.

ಆದುದರಿಂದ, ಈ ಪ್ರಕರಣದಲ್ಲಿನ ಆಪಾದಿತರಾದ ಶ್ರೀ ಆರ್. ಗೌಡಗೇರ್, ಗ್ರಾಮ ಪಂಚಾಯತ್ ಕಾರ್ಯದರ್ಶಿ, ಉಪ್ಪಣಸಿ ಗ್ರಾಮ ಪಂಚಾಯತ್, ಹಾನಗಲ್ ತಾಲ್ಲೂಕು, ಹಾವೇರಿ ಜಿಲ್ಲೆ ಇವರು ದಿನಾಂಕ: 02.03.2019 ರಂದು ಮರಣ ಹೊಂದಿದ್ದು, ಕರ್ನಾಟಕ ನಾಗರೀಕ ಸೇವಾ ನಿಯಮಗಳು (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮಗಳಡಿಯಲ್ಲಿ ಯಾವುದೇ ದಂಡನೆ ವಿಧಿಸಲು ಅವಕಾಶವಿಲ್ಲದಿರುವುದರಿಂದ ಇವರ ಮೇಲಿನ ವಿಚಾರಣಾ ನಡವಳಿಗಳು ಮುಕ್ತಾಯಗೊಳ್ಳುತ್ತವೆ. ಆದರೆ ಈ ಪ್ರಕರಣದಲ್ಲಿ ಆಪಾದಿತ ನೌಕರರಿಂದ ಸರ್ಕಾರಕ್ಕೆ 5,96,422/- ರೂಗಳ ಆರ್ಥಿಕ ನಷ್ಟ ಉಂಟಾಗಿರುವುದರಿಂದ ಆಪಾದಿತ ನೌಕರರು ಮರಣ ಹೊಂದಿದರೂ ಸಹ, ಸದರಿ ಮೊತ್ತವನ್ನು ಕೆ.ಸಿ.ಎಸ್.ಆರ್ ನಿಯಮಗಳ ಅನುಸಾರ ಸದರಿಯವರ ಕಾನೂನು ವಾರಸುದಾರರಿಗೆ ಲಭ್ಯವಾಗುವ ಮರಣೋತ್ತರ ಸೌಲಭ್ಯಗಳನ್ನು ಕಡಿತಗೊಳಿಸಿ, ಬಾಕಿ ಉಳಿದಲ್ಲಿ ಅಂತಹ ಮೊತ್ತವನ್ನು ಕಂದಾಯ ಬಾಕಿಯೆಂದು ವಸೂಲು ಕ್ರಮ ಕೈಗೊಳ್ಳಬೇಕಾಗುತ್ತದೆ.

ಆದುದರಿಂದ ಈ ಪ್ರಕರಣದಲ್ಲಿನ 1ನೇ ಎದುರುದಾರರಾದ ಶ್ರೀ ವೈ.ಬಿ ತಳವಾರ್, ಗ್ರಾಮ ಪಂಚಾಯತ್ ಕಾರ್ಯದರ್ಶಿ ಇವರ ಮೇಲಿನ ಆರೋಪಗಳಿಂದ ದೋಷಮುಕ್ತಗೊಳಿಸಿ ಮತ್ತು 2ನೇ ಎದುರುದಾರರಾದ ಶ್ರೀ ಆರ್. ಗೌಡಗೇರ್, ಗ್ರಾಮ ಪಂಚಾಯತ್ ಕಾರ್ಯದರ್ಶಿ, ಉಪ್ಪಣಸಿ ಗ್ರಾಮ ಪಂಚಾಯತ್, ಹಾನಗಲ್ ತಾಲ್ಲೂಕು, ಹಾವೇರಿ ಜಿಲ್ಲೆ ಇವರು ಮರಣ ಹೊಂದಿರುವುದರಿಂದ ಇವರಿಗೆ ಮಾನ್ಯ ಉಪಲೋಕಾಯುಕ್ತರು ಶಿಫಾರಸ್ಸು ಮಾಡಿರುವಂತೆ ದಂಡನೆಯನ್ನು ವಿಧಿಸುವುದನ್ನು ಕೈಬಿಟ್ಟು, ಅವರಿಂದ ದುರುಪಯೋಗವಾದ ಮೊತ್ತ ರೂ. 5,96,422/- ಗಳನ್ನು ಮಾತ್ರ ಸದರಿಯವರ ಕಾನೂನು ವಾರಸುದಾರರಿಗೆ ಲಭ್ಯವಾಗುವ ಮರಣೋತ್ತರ ಸೌಲಭ್ಯಗಳನ್ನು ಕಡಿತಗೊಳಿಸಿ, ಬಾಕಿ ಉಳಿದಲ್ಲಿ ಅಂತಹ ಮೊತ್ತವನ್ನು ಕಂದಾಯ ಬಾಕಿಯೆಂದು ವಸೂಲು ಮಾಡುವ ದಂಡನೆ ವಿಧಿಸಲು ನಿರ್ಣಯಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 255 ಗ್ರಾಪಂಕಾ 2019, ಬೆಂಗಳೂರು, ದಿನಾಂಕ:-12.04.2022.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ವೈ.ಬಿ ತಳವಾರ್, ಅಂದಿನ ಗ್ರಾಮ ಪಂಚಾಯತ್ ಕಾರ್ಯದರ್ಶಿ, ಉಪ್ಪಣಸಿ ಗ್ರಾಮ ಪಂಚಾಯತ್, ಹಾನಗಲ್ ತಾಲ್ಲೂಕು, ಹಾವೇರಿ ಜಿಲ್ಲೆ ಇವರ ವಿರುದ್ಧದ ಆರೋಪದಿಂದ ದೋಷಮುಕ್ತರನ್ನಾಗಿಸಿ ಆದೇಶಿಸಿದೆ.

ಶ್ರೀ ಆರ್. ಗೌಡಗೇರ್, ಹಿಂದಿನ ಗ್ರಾಮ ಪಂಚಾಯತ್ ಕಾರ್ಯದರ್ಶಿ, ಉಪ್ಪಣಸಿ ಗ್ರಾಮ ಪಂಚಾಯತ್, ಹಾನಗಲ್ ತಾಲ್ಲೂಕು, ಹಾವೇರಿ ಜಿಲ್ಲೆ ಇವರು ದಿನಾಂಕ: 02.03.2019 ರಂದು ಮರಣ ಹೊಂದಿರುವುದರಿಂದ ಇವರ ವಿರುದ್ಧ ದಂಡನೆ ವಿಧಿಸುವುದನ್ನು ಕೈ ಬಿಡಲಾಗಿದೆ.

ಮುಂದುವರೆದು, ಪ್ರಕರಣದಲ್ಲಿ ದುರುಪಯೋಗವಾಗಿರುವ ಮೊತ್ತ ರೂ. 5,96,422/- ಗಳನ್ನು ದಿವಂಗತ ಶ್ರೀ ಆರ್.ಗೌಡಗೇರ್‌ರವರ ಕಾನೂನು ವಾರಸುದಾರರಿಗೆ ಲಭ್ಯವಾಗುವ ಮರಣೋತ್ತರ ಸೌಲಭ್ಯಗಳನ್ನು ಕಡಿತಗೊಳಿಸಿ, ಬಾಕಿ ಉಳಿದಲ್ಲಿ ಅಂತಹ ಮೊತ್ತವನ್ನು ಕಂದಾಯ ಬಾಕಿಯೆಂದು ವಸೂಲು ಮಾಡಲು ಕ್ರಮವಹಿಸುವಂತೆ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

12/4/22
(ರಾಜು ಎಂ.ವಿ)
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ,**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ಅಪರ ನಿಬಂಧಕರು-9, ಕರ್ನಾಟಕ ಲೋಕಾಯುಕ್ತ, ಬಹುಮಹಡಿ ಕಟ್ಟಡ, ಬೆಂಗಳೂರು.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಹಾವೇರಿ ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಹಾನಗಲ್, ಹಾವೇರಿ ಜಿಲ್ಲೆ.
   ದಿವಂಗತ ಶ್ರೀ ಆರ್. ಗೌಡಗೇರ್, ಹಿಂದಿನ ಗ್ರಾಮ ಪಂಚಾಯತ್ ಕಾರ್ಯದರ್ಶಿ, ಉಪ್ಪಣಸಿ ಗ್ರಾಮ ಪಂಚಾಯತ್, ಹಾನಗಲ್ ತಾಲ್ಲೂಕು, ಹಾವೇರಿ ಜಿಲ್ಲೆ ಇವರ ವಾರಸುದಾರರು **(ಇವರಿಗೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್ ಹಾನಗಲ್ಲ. ಹಾವೇರಿ ಜಿಲ್ಲೆ ಇವರ ಮುಖಾಂತರ)**
6. ಗಣಕ ಕೋಶ, ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
7. ಶಾಖಾ ರಕ್ಷಾ ಕಡತ/ಹೆಚ್ಚುವರಿ/ಪ್ರತಿ.